## ಬಕ್ರಿ... ಭಕ್ಕರಿ...

ಪತಿಯ ಉದ್ಯೋಗದ ನಿಮಿತ್ತ ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಇದ್ದೆವು. ಕೆಲದಿನಗಳ ನಂತರ ಅಷ್ಟಿಷ್ಟು ಮರಾಠಿ ಕಲಿತೆ. ಅದನ್ನು ಮನೆ ಮಾಲೀಕರ ಮಗಳ ಮುಂದೆ ಪ್ರಯೋಗಿಸುತ್ತಿದ್ದೆ. ಒಂದು ದಿನ ರಾತ್ರಿ ಅಡುಗೆ ತಯಾರಿಯಲ್ಲಿದ್ದೆ. ಹೊರಗೆ ನನ್ನ ಮಗಳೊಂದಿಗೆ ಆಟವಾಡುತ್ತಿದ್ದ ಮಾಲೀಕರ ಮಗಳು ಕಿಟಕಿಯಲ್ಲಿ ಇಣುಕಿ, 'ಏನಡುಗೆ ಮಾಡ್ತಿದೀರಾ?' ಎಂದು ಕೇಳಿದಳು. 'ಭಕ್ಕರಿ, ಭಾಜಿ ಮಾಡ್ತಾ ಇದ್ದೀನಿ' ಎಂದೆ ಮರಾಠಿಯಲ್ಲಿ.

ಮರುದಿನ ಬೆಳಗ್ಗೆ ಮನೆ ಮಾಲೀಕರ ತಾಯಿ ನನ್ನನ್ನು ಕಂಡವರೇ ಜೋರು ಜೋರಾಗಿ ಮರಾಠಿಯಲ್ಲಿ ಏನೇನೊ ಹೇಳಲಾರಂಭಿಸಿದರು. ಆಗ ನೆರವಿಗೆ ಬಂದ ಅವರ ಸೊಸೆ, 'ಬ್ರಾಹ್ಮಣರಾಗಿ ಮಾಂಸ ತಿನ್ನುತ್ತೀರಾ? ಎಂದು ಕೇಳುತ್ತಿದ್ದಾರೆ ಅತ್ತೆ' ಎಂದರು ಮುಜುಗರದಿಂದ. ನಾನು ಕಕ್ಕಾವಿಕ್ಕಿಯಾದೆ. ಹಿಂದಿನ ದಿನ ನಮ್ಮ ಮನೆಯಿಂದ ಹೋದ ಅವರ ಮಗಳು, 'ಆಂಟಿ ಊಟಕ್ಕೆ ಬಕ್ರಿ ತಯಾರಿ ಮಾಡುತ್ತಿದ್ದರು' ಎಂದಿದ್ದಳಂತೆ. 'ನಾನು ಭಕ್ಕರಿ (ಜೋಳದ ರೊಟ್ಟಿ) ಎಂದಿದ್ದು, ಬಕ್ರಿ (ಕುರಿ) ಅಲ್ಲ' ಎಂದು ವಿವರಿಸಿದೆ.

**ಮೇಧಾ ಭಟ್**





## ಟಾಯ್ಲೆಟ್‌ನಲ್ಲಿದ್ದಾರೆ

ಮೊಬೈಲ್ ಫೋನುಗಳು ಆಗ ತಾನೆ ಕಾಲಿಟ್ಟ ಸಮಯ. ಗೆಳೆಯನೊಬ್ಬನ ಮೊಬೈಲಿಗೆ ಕರೆ ಮಾಡಿದಾಗ ಪದೇಪದೇ ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ ಎಂದೇ ಬರುತ್ತಿತ್ತು. ಆತನ ಸ್ಥಿರ ದೂರವಾಣಿಗೆ ಕರೆ ಮಾಡಿ ವಿಚಾರಿಸಿದೆ. ಅವನ ಪತ್ನಿ, 'ಟಾಯ್ಲೆಟ್ ಒಳಗಿದ್ದಾರೆ' ಎಂದರು. ಅಮೇಲೆ ಮತ್ತೆ ನಾಲ್ಕಾರು ಸಲ ಫೋನ್ ಮಾಡಿದಾಗಲೂ ಇದೇ ಉತ್ತರ ಬಂತು. 'ಯಾಕೆ ಟಾಯ್ಲೆಟ್‌ನಿಂದ ಹೊರಗೆ ಬರ್ತಾ ಇಲ್ಲ? ಏನಾದರೂ ಸಮಸ್ಯೆ ಇದೆಯಾ?' ಎಂದು ಕೇಳಿದೆ. ಆಕೆ, 'ಹಾಗೇನಿಲ್ಲ, ಅವರು ಹೊಸ ಮೊಬೈಲ್ ತಗೊಂಡಿದ್ದಾರೆ. ಅದನ್ನ ಗೆಳೆಯರಿಗೆಲ್ಲಾ ಹೇಳಬೇಕು. ಆದರೆ, ಟಾಯ್ಲೆಟ್ ಒಳಗೆ ಮಾತ್ರ ಒಮ್ಮೊಮ್ಮೆ ಸ್ವಲ್ಪ ಸಿಗ್ನಲ್ ಸಿಗುತ್ತೆ. ಅದಕ್ಕೆ ಅಲ್ಲೇ ಕುಳಿತುಕೊಂಡು ಫೋನ್ ಮಾಡ್ತಾ ಇದ್ದಾರೆ' ಎಂದಳು!

**ಪ. ರಾಮಕೃಷ್ಣಶಾಸ್ತ್ರಿ**

ಕಲೆ: ಗಣೇಶ ಆಚಾರ್ಯ